International Journal of Kannada Research
www.kannadajournal.com

ISSN: 2454–5813
IJKR 2021; 7(2): 01-03
© 2021 IJKR
www.kannadajournal.com
Received: 01-02-2021
Accepted: 03-03-2021

**ಡಾ. ಗುರುಬಸಪ್ಪ. ಬ. ಮಹಾಮನ**
ಸಹಾಯಕ ವಯೋಲಿನ್ ಉಪನ್ಯಾಶಕರು, ಲಲಿತ ಕಲಾ ಹಾಗೂ ಸಂಗೀತ ಮಹಾವಿದ್ಯಾಲಯ, ಧಾರವಾಡ

**Corresponding Author:**
**ಡಾ. ಗುರುಬಸಪ್ಪ. ಬ. ಮಹಾಮನ**
ಸಹಾಯಕ ವಯೋಲಿನ್ ಉಪನ್ಯಾಶಕರು, ಲಲಿತ ಕಲಾ ಹಾಗೂ ಸಂಗೀತ ಮಹಾವಿದ್ಯಾಲಯ, ಧಾರವಾಡ

# ಕರ್ನಾಟಕದ ಶಿವಯೋಗಿ ಗಾನಯೋಗಿಗಳು

**ಡಾ. ಗುರುಬಸಪ್ಪ. ಬ. ಮಹಾಮನ**

ಹಾನಗಲ್ ಶ್ರೀ ಕುಮಾರಸ್ವಾಮಿಗಳು 'ಶ್ರೀ ಹಕ್ಕಲ ಬಸವೇಶ್ವರ' ಜಾತ್ರೆ ನಿಮಿತ್ತ ಕಾಡಶೆಟ್ಟಿ ಹಳ್ಳಿಗೆ ದಯಮಾಡಿಸಿದ್ದರು. ಅಂದಿನ ಸಮಾರಂಭದಲ್ಲಿ ಗುರುಬಸವ ಮತ್ತು ಗದಿಗಯ್ಯ ಎಂಬ ಸಹೋದರರ ಮಧುರ ಕಂಠ ಕುಮಾರಸ್ವಾಮಿಗಳನ್ನು ಸಂತುಷ್ಟಗೊಳಿಸಿತು. ಬಾಲಕರ ಪ್ರತಿಭೆ ಕಂಡು ಸ್ವಾಮಿಗಳು ಅವರನ್ನು ತಮ್ಮೊಂದಿಗೆ ಹಾನಗಲ್ಲ ಮಠಕ್ಕೆ ಕರೆದುಕೊಂಡು ಬಂದರು. ಆಗಿನದು ದಕ್ಷಿಣಾದಿ ಸಂಗೀತದ ಪ್ರಭಾವವು ಇತ್ತು. ಬಾಲಕರಿಗೆ ಸಂಗೀತ ಕಲಿಸುವ ಹೊಣೆಹೊತ್ತಿದ್ದ ಕುಮಾರಸ್ವಾಮಿಗಳು ಯೋಗ್ಯ ಸಂಗೀತ ಗುರುವಾದ ತಂಜಾವೂರಿನ ಕರ್ನಾಟಕಿ ಸಂಗೀತಗಾರರಿಂದ ಬಾಲಕರಿಗೆ ಸಂಗೀತ ಅಭ್ಯಾಸ ಮಾಡಿಸಿದರು. ನಂತರದ ಅಭ್ಯಾಸವನ್ನು ಹರಪನಳ್ಳಿ ಭೀಮರಾಯಪ್ಪ, ಶಿರಾಳಕೊಪ್ಪದ ಗದಿಗೆಯ್ಯ ಇವರ ಹತ್ತಿರ ಎಂಟು ವರ್ಷ ನಿರಂತರ ಸಂಗೀತ ಅಭ್ಯಾಸ ಮಾಡಿ, ಮರಳಿ ಹಾನಗಲ್ಲಿಗೆ ಬಂದರು.

ಬಾಲಕರ ಸಂಗೀತ ಪ್ರಗತಿ ಕಂಡು ಕುಮಾರಸ್ವಾಮಿಗಳಿಗೆ ಅತ್ಯಾನಂದವಾಯಿತು. ಆದರೆ ಬಾಲಕರಿಗೆ ಇನ್ನೂ ಕಲಿಯಬೇಕೆಂಬ ಹಂಬಲವಿತ್ತು. ಇವರ ಇಚ್ಛೆಯಂತೆ ಶಿರಾಳಕೊಪ್ಪದ ಗವಾಯಿಗಳ ಸಲಹೆಯಂತೆ ಹೆಚ್ಚಿನ ವಿದ್ಯೆ ಕಲಿಯಲು ಸ್ವಾಮಿಗಳು ಮಕ್ಕಳನ್ನು ಮೈಸೂರಿಗೆ ಕಳಿಸಲು ಸಿದ್ಧತೆ ನಡೆಸಿದರು. ಅದೇ ಅವಧಿಯಲ್ಲಿ ಒಂದು ಅನಾಹುತ ಸಂಭವಿಸಿತು. ಗದಿಗಯ್ಯನ ಅಣ್ಣ ಗುರುಬಸವನ ಅಕಾಲಿಕ ಮೃತ್ಯು ಸ್ವಾಮಿಗಳಿಗೂ ಅಘಾತ ತಂದಿತು. ಅಣ್ಣನ ಆಸರೆಯೊಂದಿಗೆ ಬೆಳೆದಿದ್ದ ಗದಿಗೆಯ್ಯನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಸ್ವಾಮಿಗಳು ಸಮಾಧಾನ ಹೇಳಿದರು. ತನ್ನ ಗುರಿಯತ್ತ ಸಾಗಲು ಸಲಹೆ ಮಾಡಿದರು. ಮೈಸೂರು ದಕ್ಷಿಣಾದಿ ಸಂಗೀತದ ಬಹುದೊಡ್ಡ ಕೇಂದ್ರ. ಅನೇಕ ಸಂಗೀತಗಾರರಿಗೆ ಅಲ್ಲಿ ರಾಜಾಶ್ರಯ ದೊರೆತಿತ್ತು. ಇಂಥ ಒಂದು ಸಾಂಸ್ಕೃತಿಕ ನಗರದ ಅಂಧರ ಸಂಗೀತ ಶಾಲೆಯ ಪಿಟೀಲೂ ವಿದ್ವಾನ್ ವೆಂಕಟರಮಣಯ್ಯರಲ್ಲಿ ನಾಲ್ಕು ವರ್ಷಗಳ ಕಾಲ ಸಂಗೀತ ಸಾಧನೆ ಮಾಡಿದರು. ಗದಿಗೆಯ್ಯನವರ ಸಂಗೀತ ಪ್ರತಿಭೆಗೆ ಮೈಸೂರಿನ ಅನೇಕ ಸಂಗೀತ ವಿದ್ವಾಂಸರು ಮೆಚ್ಚಿಕೊಂಡಿದ್ದರು ಹಾಗೂ ಶ್ರೀ ಗೌರಿಶಂಕರ ಮಹಾಸ್ವಾಮಿಗಳು ಗದಿಗೆಯ್ಯನವರ ಪ್ರತಿಭೆಯನ್ನು ಮೆಚ್ಚಿ ಇವರಿಗೆ ಪಂಚಾಕ್ಷರಿ ಎಂಬ ಹೆಸರನ್ನಿಟ್ಟರು. ಅದೇ ಹೊತ್ತಿಗೆ ಬಾಗಲಕೋಟೆಯಲ್ಲಿ ಅಖಿಲ ಭಾರತ ನಾಲ್ಕನೇ ವೀರಶೈವ ಮಹಾಧಿವೇಶನದಲ್ಲಿ ಮನತುಂಬಿ ಹಾಡಿದ ಗದಿಗೆಯ್ಯಗೆ ಶ್ರೀ ಗೌರಿಶಂಕರ ಮಹಾಸ್ವಾಮಿಗಳು ಇಟ್ಟ ಹೆಸರನ್ನು ಶ್ರೀ ಕುಮಾರಸ್ವಾಮಿಗಳು ಅಂದಿನ ಅಧಿವೇಶನದಲ್ಲಿ ಪಂಚಾಕ್ಷರಿ ಗವಾಯಿ ಎಂಬ ಮರು ನಾಮವನ್ನು ಮಾಡಿದ್ದರು. ನಂತರ ಹಿಂದೂಸ್ತಾನಿ ಸಂಗೀತವನ್ನು ಆ ಕಾಲದ ಬಹುದೊಡ್ಡ ಸಂಗೀತಗಾರರಾದ ಉಸ್ತಾದ್ ಅಬ್ದುಲ್ ವಹೀದಖಾನರಲ್ಲಿ ಕಿರಾಣ ಘರಾಣೆಯ ಅಭ್ಯಾಸ ಮಾಡಿ, ಪಂ. ನೀಲಕಂಠ ಬುವಾ ಮಿರಜ್ಕರ್ ಇವರ ಹತ್ತಿರ ಮೂರು ವರ್ಷಗಳ ಕಾಲ ಸಂಗೀತ ಸಾಧನೆ ಮಾಡಿ, ನಂತರ ಬೆಳಗಾವಿಯಲ್ಲಿ ಪಂ. ರಾಮಕೃಷ್ಣ ಬುವಾ ವಝೆ, ಪಂ. ಬಾಬುರಾವ ರಾಣೆ ಮುಂತಾದ ಸಂಗೀತ ದಿಗ್ಗಜರಿಂದ ಪಂಚಾಕ್ಷರ ಗವಾಯಿಗಳು ಸಂಗೀತ ಸಾಧನೆ ಗೈದು ಹಾಗೂ ಬಾಗಲಕೋಟೆಯ ರಾಜಾಸಾಬ ಹಾಗೂ ಜೇಕಿನಕಟ್ಟಿ ಶಿವಯ್ಯನವರಿಂದ ಪಂಚಾಕ್ಷರಿ ಗವಾಯಿಗಳು ತಬಲಾ ಕಲಿತರು. ಪಂಚಾಕ್ಷರಿ ಗವಾಯಿಗಳು ಆರಂಭದಲ್ಲಿ ಕರ್ನಾಟಕಿ ಸಂಗೀತವನ್ನು ನಂತರ ಹಿಂದೂಸ್ತಾನಿ ಸಂಗೀತವನ್ನು ಅಭ್ಯಸಿಸಿ ಉಭಯ ಗಾಯನಾಚಾರ್ಯರೆನಿಸಿದರು. ಶ್ರೇಷ್ಠ ಗುರುಗಳ ಗರಡಿಯಲ್ಲಿ ತರಬೇತಿ ಪಡೆದು 'ಪಂಡಿತ'ರೆನಿಸಿದರು. ಗಾನಯೋಗಿಗಳಾದರು.

ಸಮಾಜದ ಕಣ್ಣಲ್ಲಿ ಹೊರೆ ಎನಿಸಿದ, ಹೆತ್ತವರಿಗೆ ಭಾರವೆನಿಸಿದ ಅನೇಕ ಜನ ಅಂಧ–ಅನಾಥ ಮಕ್ಕಳಿಗೆ ಸಂಗೀತದ ಜೊತೆಗೆ ಕೀರ್ತನ, ಪ್ರವಚನ, ನಾಟಕಾಭಿನಯದ ಕಲೆಯನ್ನು ಕಲಿಸಿದರು. ಶ್ರೀ ಕುಮಾರಮಹಾಸ್ವಾಮಿಗಳು 1914ರಲ್ಲಿ ಬಸವ ಜಯಂತಿಯ ಶುಭದಿನದಂದು ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ನಿಡಗುಂದಿಕೊಪ್ಪದ ಶಾಖಾ ಶಿವಯೋಗ ಮಂದಿರದಲ್ಲಿ 'ಕುಮಾರೇಶ್ವರ

ಕೃಪಾಪೋಷಿತ ಸಂಗೀತ–ಸಾಹಿತ್ಯ ಮಹಾವಿದ್ಯಾಲಯ' ಸ್ಥಾಪಿಸಿದರು. ಸಂಸ್ಥೆಯ ಆರ್ಥಿಕ ಮುಗ್ಗಟ್ಟು ನಿವಾರಿಸಲು ಗವಾಯಿಗಳು 'ಶ್ರೀ ಕುಮಾರೇಶ್ವರ ಕೃಪಾಪೋಷಿತ ಸಂಗೀತ ನಾಟಕ ಮಂಡಳಿ' ಸ್ಥಾಪಿಸಿ ತನ್ಮೂಲಕ ನಾಟಕ ಅಭಿನಯಿಸಲು ಆರಂಭಿಸಿ, ಆರ್ಥಿಕ ಭಾರ ಕಡಿಮೆ ಮಾಡಿದರು. ನಂತರ 1940 ರಲ್ಲಿ ನರಗುಂದದಲ್ಲಿ 'ಸೊನ್ನಲಾಪುರ ಸಿದ್ಧರಾಮೇಶ್ವರ' ನಾಟಕ ಮತ್ತು ಶ್ರೀ ಪುಟ್ಟರಾಜ ಗವಾಯಿಗಳು ರಚಿಸಿದ 'ಹೇಮರಡ್ಡಿ ಮಲ್ಲಮ್ಮ' ಹೀಗೆ ಅನೇಕ ನಾಟಕಗಳನ್ನು ಪ್ರದರ್ಶನಗೊಳಿಸಿ ಆರ್ಥಿಕ ತೊಂದರೆಯನ್ನು ನಿವಾರಿಸಿದರು.

1940ರಲ್ಲಿ ಧಾರವಾಡ–ಗದಗ ಭಾಗದಲ್ಲಿ ಭೀಕರ ಬರಗಾಲ ಸಮಯದಲ್ಲಿ ಶ್ರೀ ಬಸರಿಗಿಡದ ವೀರಪ್ಪನವರು ಗವಾಯಿಗಳಿಗೆ ಊಟ, ವಸತಿ ವ್ಯವಸ್ಥೆ ಮಾಡಿ ಮತ್ತು ತಮ್ಮ ಭೂಮಿಯನ್ನು ಗವಾಯಿಗಳಿಗೆ ದಾನವಾಗಿ ನೀಡಿ ಅಲ್ಲಿ ಅವರಿಗೆ ಆಶ್ರಮ ಕಟ್ಟಿಸಿಕೊಟ್ಟರು ಅದು ಇಂದು 'ಶ್ರೀ ವೀರೇಶ್ವರ ಪುಣ್ಯಾಶ್ರಮ ಎಂಬ ಹೆಸರಿನಲ್ಲಿ ಹೆಮ್ಮರವಾಗಿ ಬೆಳೆದು ನಿಂತಿದೆ.

"ಎನ್ನ ಕಾಯವ ದಂಡಿಗೆಯ ಮಾಡಯ್ಯ
ಎನ್ನ ಶಿರವ ಸೋರೆಯ ಮಾಡಯ್ಯ
ಎನ್ನ ನರವ ತಂತಿಯ ಮಾಡಯ್ಯ
ಎನ್ನ ಬೆರಳ ಕಡ್ಡಿಯ ಮಾಡಯ್ಯ
ಬತ್ತಿಸ ರಾಗವ ಪಾಡಯ್ಯ ಉರದಲ್ಲೊತ್ತಿ ಬಾರಿಸು
ಕೂಡಲ ಸಂಗಮ ದೇವಾ"

ಜಗಜ್ಯೋತಿ ಬಸವಣ್ಣನವರು ಬರೆದ ಈ ವಚನದಲ್ಲಿ ಬರುವಂತಹ ಸಾರಂಶವು ಆರಾಧ್ಯ ಪೂಜ್ಯ ಗಾನಯೋಗಿ, ಪಂಡಿತ ಪಂಚಾಕ್ಷರಿ ಗವಾಯಿಗಳಿಗೆ ಸಲ್ಲುತ್ತದೆ. ತಮ್ಮ ಜೀವಮಾನವಿಡೀ ಸಮಾಜಕ್ಕಾಗಿ, ಸಂಗೀತಕ್ಕಾಗಿ ದೀನ–ದಲಿತ, ಅಂಧ–ಅನಾಥ–ಅನಕ್ಷರಸ್ಥರಿಗಾಗಿ ದುಡಿದು ಹಣ್ಣಾದರು. ಕಾಯಿಲೆಯಿಂದ ಹಾಸಿಗೆ ಹಿಡಿದು 1944ರ ಜೂನ್ 11ರಂದು ಜೇಷ್ಠ ಬಹುಳ ಪಂಚಮಿಯಂದು ಲಿಂಗೈಕ್ಯರಾದರು.

ಗಾನಯೋಗಿ, ಪಂಡಿತ ಪಂಚಾಕ್ಷರಿ ಗವಾಯಿಗಳ ಪ್ರೀತಿಯ ಶಿಷ್ಯರಾದ ಶಿವಯೋಗಿ, ಪದ್ಮಭೂಷಣ ಡಾ. ಲಿಂ ಪುಟ್ಟರಾಜ ಗುರುಗಳು ಪೀಠವನ್ನಲಂಕರಿಸಿದ ನಂತರ ಕರ್ನಾಟಕದಲ್ಲಿ ಹಿಂದೂಸ್ತಾನಿ ಸಂಗೀತದ ಬೆಳವಣಿಗೆಗೆ ಬಹುದೊಡ್ಡ ಕೊಡುಗೆ ನೀಡಿ, ಗುರುವಿನ ಮಾರ್ಗವನ್ನು ಚಾಚು ತಪ್ಪದೇ ಗುರುಗಳಂತೆಯೇ ತಮ್ಮ ಇಡೀ ಜೀವನವನ್ನೆ ಸಮಾಜಕ್ಕಾಗಿ ಅಂಧ ಅನಾಥ ಮಕ್ಕಳಿಗಾಗಿ ಸಂಗೀತ, ಸಾಹಿತ್ಯ, ಪುರಾಣ, ಕಿರ್ತನೆ ಇತ್ಯಾದಿ ಕಲೆಗಳಿಗೆ ತಮ್ಮ ಜೀವನವನ್ನು ಮುಡುಪಾಗಿಟ್ಟವರು. ಪೂಜ್ಯ ಗುರುಗಳಾದ ಡಾ. ಪಂ.ಲಿಂ. ಪುಟ್ಟರಾಜ ಕವಿ ಗವಾಯಿಗಳವರು ನಮ್ಮ ಕನ್ನಡ ನಾಡಿಗೆ ಮತ್ತು ಭಾರತೀಯ ಸಂಗೀತ ಪರಂಪರೆಯಲ್ಲಿ ಕೀರ್ತಿಯ ಕಿರಟವಾಗಿದ್ದರು ಸಾಹಿತ್ಯ, ಸಂಸ್ಕೃತಿ, ಸಂಗೀತ, ಪುರಾಣ, ಕೀರ್ತನೆ ಈ ಎಲ್ಲಾ ಕ್ಷೇತ್ರಗಳಲ್ಲಿಯೂ ಅವರೊಬ್ಬ ಮಹಾನ್ ಕಲಾ ತಪಸ್ವಿ ಎಂದು ಹೇಳಬಹುದು. ಕನ್ನಡ, ಸಂಸ್ಕೃತ, ಹಿಂದಿ ಈ ತ್ರಿಭಾಷೆಗಳಲ್ಲಿ 60 ಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇಂತಹ ಮಹಾನ್ ಕಲಾ ತಪಸ್ವಿಗೆ ನಮ್ಮ ನಾಡು "ತ್ರಿಭಾಷಾ ಕವಿ" ಯೆಂದು ಗೌರವಿಸಿದ್ದಾರೆ. ಸಂಗೀತ ಕ್ಷೇತ್ರದಲ್ಲಿಯೂ ಅವರದು ಅಮೋಘವಾದ ಕೊಡುಗೆ ನಿಡಿದ್ದಾರೆ ತಾವು ಸ್ವತ: ಹೊಸ ಹೊಸ ಚೀಜ್‌ಗಳನ್ನು ಸೃಷ್ಠಿಸಿ ಸಂಗೀತ ಕ್ಷೇತ್ರವನ್ನು ಹಿರಿಮೆಯಾಗಿಸಿದ್ದಾರೆ. ಇವರು ರಚಿಸಿದ ಚೀಜ್‌ಗಳು ಮೊಟ್ಟ ಮೊದಲು ಕಿಶೋರ (ಕುಮಾರ) ಎಂಬ ನಾಮದೊಂದಿಗೆ ರಚಿಸಿ ನಂತರ ಪಂಚಾಕ್ಷರೇಶ್ವರ ಎಂಬ ಕಾವ್ಯನಾಮದಿಂದ ಅನೇಕ ಚೀಜ್‌ಗಳು ರಚನೆ ಮಾಡಿದ್ದಾರೆ. ಇಂತಹ ಚೀಜ್‌ಗಳು ಪ್ರಸ್ತುತ ಪ್ರಚಲಿತದಲ್ಲಿವೆ.

ಉದಾ : ಮೊಟ್ಟ ಮೊದಲು ಕಿಶೋರ ಎಂಬ ನಾಮದಿಂದ ರಚಿಸಿದ ಚೀಜ್ ರಾಗ ಕೊಮಲರಿಷಭ ಅಸಾವರಿಯಲ್ಲಿ ಪ್ರಸ್ತುತ ಬಹು ಪ್ರಚಾರದಲ್ಲಿ ಕಂಡು ಬರುವಂತಹ ಬಂದಿಶ್ ಆಗಿದೆ.

ತಾಲ : ದೃತ್ ತಿನತಾಲ

"ಕಾಜ ಕಿಜಿಯೇ ಹರ ರೋಜ ಸಮಜ್
ಜಾನ ವರಕೆ ಮತ್ ಸಂತಕೆ ಸಮನಿಜಾ
ಅಂತರ
ಯಾನ ಬೇಕಾಜಕೀ ಜುದಾಯಿ
ನವಭೋಯಾ ಕಿಶೋರ ಕೃಪಾ ಬಿತಾಯೇ"

ನಂತರ ಗಾನಯೋಗಿ ಪಂ. ಪಂಚಾಕ್ಷರ ಗವಾಯಿಗಳ ನಾಮದಿಂದ ಮಾಡಿರುವ ಅನೇಕ ಚೀಜ್‌ಗಳು ಪ್ರಚಾರದಲ್ಲಿ ಕಾಣುತ್ತೇವೆ. ಉದಾ : ರಾಗ ಪಟದೀಪದಲ್ಲಿ ಪೂಜ್ಯರು ರಚಿಸಿದ
ದೃತ್ ಏಕತಾಲದಲ್ಲಿ.

"ಬಾರ ಬಾರ ದೊ ದರಸನ
ಕಾನ ಉಧಾರೊ ತುಮ ಬಿನ
ಅಂತರ
ತಾತ ಭ್ರಾತ ಆದಿ ಸಜನಿ
ತುಮ ಗುರು ಪಂಚಾಕ್ಷರ ಘನ"

ಹೀಗೆ ಇಂತಹ ಇತ್ಯಾದಿ ಚೀಜ್‌ಗಳು ಅನೇಕ ವಿದ್ವಾನ ಕಲಾವಿದರು ಹಾಗೂ ಹಿರಿಯ ಗುರುಬಂಧುಗಳು ಹಾಡಿದ್ದಾರೆ, ಹಾಡುತ್ತಿದ್ದಾರೆ. ಉದಾಹರಣೆಗೆ : ಪಂ. ಬಸವರಾಜ ರಾಜಗುರು, ಪಂ. ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ, ಪಂ. ಅರ್ಜುನಸಾ ನಾಕೊಡ, ಪಂ. ಚಂದ್ರಶೇಖರ ಪುರಾಣಿಕ ಮಠ, ಪಂ. ಹನುಮಂತಸಿಂಗ್ ಹಾನಗಲ್, ಹಾಗೂ ಪ್ರಸ್ತುತ ಕಾಲದಲ್ಲಿಯೂ ಕೂಡಾ ಅನೇಕ ವಿದ್ವಾಂಸರು ಪೂಜ್ಯರು ರಚಿಸಿದ ಚೀಜ್‌ಗಳನ್ನು ಇಂದಿಗೂ ಹಾಡುತ್ತಾರೆ. ಉದಾಹರಣೆಗೆ ಪಂ. ಸಿದ್ರಾಮಸ್ವಾಮಿ ಕೊರವಾರ, ಪಂ. ರಾಜಗುರು ಗುರುಸ್ವಾಮಿ ಕಲಿಕೇರಿ, ಪಂ. ಬಸವರಾಜ ಗೋನಾಳ, ಪದ್ಮಶ್ರೀ ಪುರಸ್ಕೃತರಾದ ಪಂ. ಎಂ. ವೆಂಕಟೇಶಕುಮಾರ, ಪಂ. ಡಿ. ಕುಮಾರದಾಸ, ಪಂ. ಬಾಲಚಂದ್ರ ನಾಕೊಡ, ಶ್ರೀ ಕಿರಣಕುಮಾರ ಹಾನಗಲ್ಲ್ ಹಾಗೂ ವಾದ್ಯಗಳಲ್ಲಿಯೂ ಇವರ ಚೀಜ್‌ಗಳನ್ನು ನುಡಿಸುವದು ಕಂಡು ಬರುತ್ತದೆ. ಉದಾಹರಣೆಗೆ : ವಯೋಲಿನ್ ವಾದಕರಾದ ಪಂ. ವಿರೇಶ ಮದ್ರಿ, ಪಂ. ಈಶ್ವರ ಮೊರಿಗೇರಿ, ಪಂ. ಬಿ. ಎಸ್. ಮಠ, ವಿಧುಷಿ. ಅಕ್ಕಮಹಾದೇವಿ ಮಠ, ಶ್ರೀ ಹನುಮಂತಪ್ಪ ಕಾಮನಳ್ಳಿ, ಶ್ರೀ ನಾರಾಯಣ ಹಿರೇಕೊಳಚಿ. ಹೀಗೆ ಅನೇಕ ಚೀಜ್‌ಗಳು ಹಾಡುಗಾರಿಕೆ ಮತ್ತು ವಾದ್ಯ ಸಂಗೀತದಲ್ಲಿ ಇಂದಿಗೂ ಲಭ್ಯವಾಗುತ್ತವೆ. ಹಾಗೂ ಲಿಖಿತ ರೂಪದಲ್ಲಿ ಕಾಣುತೇವೆ. ಪ್ರಸ್ತುತ ಗಾನಸುಧಾ ಭಾಗ 1 ರಲ್ಲಿ 6 ಥಾಟ್‌ಗಳಲ್ಲಿ ಮತ್ತು ಜನ್ಯ ರಾಗಗಳಲ್ಲಿ ಈ ಚೀಜ್‌ಗಳನ್ನು ಸಂಗ್ರಹಿಸಲಾಗಿದೆ ಒಟ್ಟು 34 ರಾಗಗಳ ಸಂಗ್ರಹವು ಸಿದ್ದವಾಗಿದೆ ಒಂದೊಂದು ರಾಗದಲ್ಲಿ 5–6 ಚೀಜ್‌ಗಳಿವೆ ಸ್ವರಗೀತೆ, ಲಕ್ಷಣ ಗೀತೆ, ಖ್ಯಾಲ, ತಿಂತಾಲ, ಝುಪತಾಲ ಇತ್ಯಾದಿ ವಿಷಯದ ಬಗ್ಗೆ ಲಭ್ಯವಿರುತ್ತದೆ. ಹೀಗೆ ಭಾಗ 2 ಗಾನಸುಧಾ ಎಂಬ ಪುಸ್ತಕದಲ್ಲಿ 31 ರಾಗಗಳ ಬಗ್ಗೆ ಅನೇಕ ಬಂಧಿಶ್‌ಗಳು ಕಾಣುತ್ತೇವೆ. ಪೂಜ್ಯ ಗುರುಗಳು ಶಾಸ್ತ್ರಕಾರರು ಮತ್ತು ವಾಗ್ಗೇಯಕಾರರು ಅಗಿದ್ದರು. ಅನೇಕ ಸಂಗೀತ ಶಾಸ್ತ್ರಗಳ ಬಗ್ಗೆ ಕುರಿತು ಬರಹ

ರೂಪದಲ್ಲಿ ಕಾಣುತ್ತೇವೆ. ಉದಾ : “ಸಂಗೀತ ಶಾಸ್ತ್ರ” ಎಂಬ ಪುಸ್ತಕದಲ್ಲಿ ನಾದೋತ್ಪತ್ತಿ ಜ್ಞಾನ, ಶೃತಿ ಸ್ವರೋತ್ಪತ್ತಿ ಜ್ಞಾನ, ಗ್ರಾಮಾದಿ ಸ್ವರ ಜ್ಞಾನ, ಸಂಗೀತ ಜ್ಞಾನ, ಲಯದ ಮಹತ್ವ, ಕಂಠ ಸಂಗೀತೋತ್ಪತ್ತಿ ಜ್ಞಾನ, ವಾದ್ಯಗಳಾದ ತತ್, ಅವನದ್ದ, ಸುಷಿರ, ಘನ ಇತ್ಯಾದಿಗಳ ವಿಚಾರ ವಾದ್ಯ ಕಂಠಗಳಗಿರುವ ಸಂಬಂಧ ಇತ್ಯಾದಿ ರಾಗ ಜ್ಞಾನ ಪ್ರಕರಣ, ಗಾಯಕ ಲಕ್ಷಣ, ಜನ್ಯರಾಗ ಜ್ಞಾನ ಹೀಗೆ ಅನೇಕ ಸಂಗೀತ ವಿಷಯಗಳ ಬಗ್ಗೆ ರಚಿಸಿರುವ ಪುಸ್ತಕ ಸಂಗೀತ ಕ್ಷೇತ್ರದಲ್ಲಿ ಅಮೂಲ್ಯವಾದ ಪುಸ್ತಕಗಳಾಗಿವೆ ಎಂದು ಹೇಳಬಹುದು.